# ಯಾವಾಗ್ಲೂ ಪುಸ್ತಕ



ಯಾಕೋ ಪುಟ್ಟ ಕಿಟ್ಟನ ಕೈಲಿ
ಯಾವಾಗ್ಲೂ ಒಂದು ಪುಸ್ತಕ?

ಹೇಳಲಿಲ್ವೇ ಹಿರಿಯೋರು
ಭೂಷಣ ಅಂತ ಹಸ್ತಕ?

ಯಾಕೋ ಪುಟ್ಟ ಕಿಟ್ಟನ ಕೈಲಿ
ಯಾವಾಗ್ಲೂ ಒಂದು ಪುಸ್ತಕ?

ತುಂತುರು ಮಳೆಗೆ ಸಿಗದಿರಲೆಂತ
ಕೂದಲು ಬೆಳೆದ ಮಸ್ತಕ

ಯಾಕೋ ಪುಟ್ಟ ಕಿಟ್ಟನ ಕೈಲಿ
ಯಾವಾಗ್ಲೂ ಒಂದು ಪುಸ್ತಕ?

ಮೇಷ್ಟ್ರು ಸಿಕ್ಕರೆ ಕಾಣಿಸದಿರಲೆಂತ
ಹೋಂ ವರ್ಕ್ ಮಾಡದ ಮೊಕಾ

ಯಾಕೋ ಪುಟ್ಟ ಕಿಟ್ಟನ ಕೈಲಿ
ಯಾವಾಗ್ಲೂ ಒಂದು ಪುಸ್ತಕ?

ಬೇಡ್ವೆ ಮತ್ತೆ ಕೆಲಸಾ ಹೇಳಿದ್ರೆ
ಈಗಾಗಲ್ಲಾಂತ ಅನ್ನಕ?

ಯಾಕೋ ಪುಟ್ಟ ಕಿಟ್ಟನ ಕೈಲಿ
ಯಾವಾಗ್ಲೂ ಒಂದು ಪುಸ್ತಕ?

ಕಾಯೋಕೆ ಊಟದ ತನ್ನಕ
ಏನೂ ಮಾಡದೆ ಸುಮ್ಮಕ!

# ಉತ್ತರ

ಬಾನಲಿ ಚಂದಿರ
ಮರದಲಿ ಹಣ್ಣು
ಇಷ್ಟೊಂದೆತ್ತರ ಇಟ್ಟವರ್‍ಯಾರು?
ಗೊತ್ತಿರುವವರು ಹೇಳಿ
ದೇವರು ದೇವರು ದೇವರು

ಅಟ್ಟದಿ ಲಡ್ಡು
ಶೆಲ್ಫಲಿ ದುಡ್ಡು
ಇಷ್ಟೊಂದೆತ್ತರ ಇಟ್ಟವರ್‍ಯಾರು?
ಗೊತ್ತಿರುವವರು ಹೇಳಿ
ಲಡ್ಡಿಟ್ಟವರು ಅಮ್ಮ
ದುಡ್ಡಿಟ್ಟವರು ಅಪ್ಪ!

